ಸುಮಾರು 432 ಕೋಟಿ ರೂ.ಗಳು ವೆಚ್ಚವಾಗಿದ್ದು ಅವುಗಳನ್ನು 1996ನೇ ಇಸವಿಯ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ ಬಗ್ಗೆ ಬಂದ ಅರ್ಜಿಗಳು

373 (1580): ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಗಾಗಿ ಬಂದಿರತಕ್ಕ ಅರ್ಜಿಗಳೆಷ್ಟು;

ಆ) ಇದರಲ್ಲಿ ಕಾರ್ಯರೂಪಕ್ಕೆ ಬಂದಿರುವುದೆಷ್ಟು; ಇನ್ನೂ ಕಾರ್ಯರೂಪಕ್ಕೆ ಬರಬೇಕಾಗಿರುವುದೆಷ್ಟು;

ಇ) ಇದರಲ್ಲಿ ಟಿ. ನರಸೀಪುರ ಕ್ಷೇತ್ರಕ್ಕೆ ಸೇರಿದ ಫಲಾನುಭವಿಗಳೆಷ್ಟು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 60

ಆ) 1. ಕಾರ್ಯರೂಪಕ್ಕೆ ಬಂದಿರುವ ಯೋಜನೆಗಳ ಸಂಖ್ಯೆ	5
2. ಕಾರ್ಯರೂಪಕ್ಕೆ ಬರಬೇಕಾಗಿರುವ ಯೋಜನೆಗಳ ಸಂಖ್ಯೆ	30
3. ಅಶಕ್ಯವೆಂದು ಕೈಬಿಡಲಾದ ಯೋಜನೆಗಳ ಸಂಖ್ಯೆ	25

ಇ) ಟಿ. ನರಸೀಪುರ ಕ್ಷೇತ್ರಕ್ಕೆ ಸಂಬಂಧಿಸಿದಂತೆ 5 ಏತ ನೀರಾವರಿ ಯೋಜನೆಗಳ ಪ್ರಾಥಮಿಕ ವರದಿ ತಯಾರಿಸಿದ್ದು ಈ ವರದಿಯ ಪ್ರಕಾರ 3 ಯೋಜನೆಗಳು ಶಕ್ಯವೆಂದು ಕಂಡುಬಂದಿದೆ. ಈ ಯೋಜನೆಗಳ ವಿವರವಾದ ಸರ್ವೆ ಕಾರ್ಯದ ನಂತರ ಫಲಾನುಭವಿಗಳ ಸಂಖ್ಯೆ ತಿಳಿಯುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ನೆರವು

377 (114): ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):–

ಮಾನ್ಯ ಭಾರಿ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್‌ನವರು ಹಣಕಾಸಿನ ನೆರವು ನಿಲ್ಲಿಸಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು;

ಇ) ಮತ್ತೆ ವಿಶ್ವಬ್ಯಾಂಕ್ ನೆರವು ಪಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಓಂ ಪ್ರಕಾಶ್ ಕಣಗಲಿ (ಭಾರಿ ನೀರಾವರಿ ರಾಜ್ಯ ಮಂತ್ರಿಗಳು):–

ಅ) ನವೆಂಬರ್ 1992ರಲ್ಲಿ ವಿಶ್ವಬ್ಯಾಂಕ್‌ನವರು ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದು, ದಿನಾಂಕ 1.3.93ರಿಂದ ನೆರವನ್ನು ಪುನರಾರಂಭಿಸಿರುತ್ತಾರೆ.

ಆ) ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ವಿಶ್ವಬ್ಯಾಂಕ್‌ನವರು ನೆರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದರು.